(ಶ್ರೀ ರಾಮಕೃಷ್ಣ ಹೆಗಡೆ)

ಬ್ಯಾಂಕಿನವರು ಸ್ವಲ್ಪ ದಿವಸ ಹಾಗೆಯೇ ಇಟ್ಟರಿ ಎಂದು ಹೇಳಿದರು. ಈಗಲೂ ಕೂಡ ಅವರನ್ನು ಕಾಂಟ್ಯಾಕ್ಟ್ ಮಾಡುತ್ತಿದ್ದೇವೆ. ಆದಷ್ಟು ಜಾಗ್ರತೆಯಾಗಿ ಈ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ರಿಸರ್ವ್ ಬ್ಯಾಂಕ್ ಎಂಪ್ಲಾಯೀಸ್‌ನಿಂದ ನಿಧಾನವಾಗುತ್ತಿದೆ ಎಂದು ಹೇಳಿದರು. ಅದರ ಬಗ್ಗೆ ವಿವರಗಳು ಏನೆಂಬುದು ಗೊತ್ತಿದೆಯೇ? ಗೊತ್ತಿಲ್ಲದೆ ಹೋದರೆ ಆದಷ್ಟು ಬೇಗ ಪೆನ್‌ಷನ್‌ದಾರರಿಗೆ ಅನುಕೂಲ ಮಾಡಿಕೊಡಲು ರಿಸರ್ವ್ ಬ್ಯಾಂಕಿನವರನ್ನು ಒತ್ತಾಯ ಮಾಡಲು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಯೇ, ಸ್ವಾಮಿ?

ಶ್ರೀ ರಾಮಕೃಷ್ಣ ಹೆಗಡೆ.—ರಿಸರ್ವ್ ಬ್ಯಾಂಕ್ ಎಂಪ್ಲಾಯೀಸ್ ಸಂಘದವರು ನನ್ನನ್ನು ಭೇಟಿಯಾಗಿದ್ದರು. ನಾನು ಅವರಿಗೆ ಹೇಳಿದೆ ನಿಮ್ಮ ಪ್ರಪೋಷನ್‌ಗೂ ಇದಕ್ಕೂ ಯಾವ ತರಹ ಸಂಬಂಧವಿಲ್ಲ ಮತ್ತು ಪ್ರಪೋಷನ್‌ಗೆ ಧಕ್ಕೆ ಬರುವುದಿಲ್ಲ ಎಂದು ನಮ್ಮ ಟ್ರಾನ್ಸಾಕ್ಷನ್‌ನಲ್ಲಿ ಕೆಲವು ಭಾಗ ಸ್ಟೇಟ್ ಬ್ಯಾಂಕ್ ಅಫ್ ಮೈಸೂರಿಗೆ ವಹಿಸಿ ಕೊಡುತ್ತೇವೆ. ಅದಕ್ಕಾಗಿ ರಿಸರ್ವ್ ಬ್ಯಾಂಕಿನ ಕರ್ಮಚಾರಿಗಳು ಪ್ರತಿಭಟನೆ ಮಾಡುತ್ತಿದ್ದಾರೆ. ಒಂದೆರಡು ತಿಂಗಳ ಹಿಂದೆ ನಾನು ಬೊಂಬಾಯಿಗೆ ಹೋದಾಗ ರಿಸರ್ವ್ ಬ್ಯಾಂಕ್ ಗವರ್ನರ ಜೊತೆಯಲ್ಲಿ ಬೇರೆ ವಿಚಾರ ಮಾತನಾಡಿದಾಗ, ಈ ವಿಚಾರವಾಗಿ ಕೂಡ ಮಾತನಾಡಿದೆ. ಗವರ್ನರು ಹೊಸದಾಗಿ ಆವಾಗ ತಾನೇ ಅಧಿಕಾರ ವಹಿಸಿ ಕೊಂಡಿದ್ದುದರಿಂದ ಸ್ವಲ್ಪ ಸಮಯ ಬೇಕು, ಮಾತನಾಡಿ ಸೆಟಲ್ ಮಾಡುತ್ತೇನೆ, ಆನಂತರ ಇದನ್ನು ಮಾಡಿ ಎಂದು ಹೇಳಿದ್ದಾರೆ.

ಶ್ರೀ ಟಿ.ಆರ್. ಶಾಮಣ್ಣ.—ಒತ್ತಾಯಮಾಡಿ ಬೇಗನೆ ಸರಕಾರದ ತೀರ್ಮಾನವನ್ನು ಜಾರಿಗೆ ತರಲು ಅವಕಾಶಮಾಡುವಿರಾ?

ಶ್ರೀ ರಾಮಕೃಷ್ಣ ಹೆಗಡೆ.—ಒತ್ತಾಯಮಾಡುತ್ತಿದ್ದೇವೆಂದು ಆಗಲೇ ಹೇಳಿದೆ.

1-30 P. M.

Collection and Remission of Revenues in Bangalore District

215. Sri C. R. RANGE GOWDA (Magadi).—

Will the Minister for Revenue be pleased to state :—

(*a*) the various types of revenues that are being collected by Revenue Department in the taluks of Bangalore District ;

(*b*) the taluks of Bangalore district in which revenue has been remitted during the years 1965-66, 1966-67 and 1967-68 together with the types of revenues remitted ?

Sri H. V. KOUJALGI (Minister for Revenue).—

(*a*) The various types of revenues collected are as follows.—

(1) Land Revenue.

(2) Water rate for supply of water.

(3) Cesses on revenues.

(4) Premium in Jodi-village.

(*b*) Renmission of revenue in respect of dry lands is as shown in the list appended.

Details of dry assessment remitted for the years 1965-66, 1966-67 and 1967-68 in Bangalore District.

Taluk		1965-66		1966-67		1967-68	
		No of Villages	Amount	No. of Villages	Amount	No. of Villages	Amount
Bangalore (South)	..	242	1,07,386-69	240	1,08,052-12	240	1,08,339-19
Bangalore (North)	...	175	63,939-90	190	65,412-64	201	68,048-18
Anekal	...	224	1,43,873-79	179	1,27,192-28	—	—
Devanahalli	...	275	1,37,795-31	274	1,29,048-01	273	1,33,749-28
Doddaballapur	...	298	1,25,388-45	57	23,326-59	57	18,568-45
Nelamangala	...	315	1,36,016-91	315	1,36,016-91	315	1,36,016-91
Hoskote	...	346	1,29,355-41	223	25,457-24	297	50,263-34
Ramanagaram	...	132	86,951-85	55	34,423-28	45	37,795-78
Channapatna	...	144	69,276-87	144	34,652-38	144	69,276-87
Kanakapura	...	196	1,28,652-50	62	38,305-00	76	50,038-00
Magadi	...	332	1,50,447-95	9	4,250-28	151	77,320-34
Total	...	2,679	12,79,085-63	1,748	7,26,136-73	1,799	7,49,416-34

ಶ್ರೀ ಸಿ. ಆರ್. ರಂಗೇಗೌಡ.—65-66, 66-67 ಮತ್ತು 67-68 ನೆಯ ಸಾಲುಗಳಲ್ಲಿ ಕೆರೆಗಳಿಗೆ ನೀರು ಬಾರದೆ ಫಸಲಾಗದಿರುವುದರಿಂದ ತರಿ ಕಂದಾಯವನ್ನು ಕೂಡ ವಜಾ ಮಾಡಿ ಆದೇಶ ನೀಡುವಿರಾ?

Sri H. V. KOUJALGI.—So far as water rate is concerned, it is separately levied. If no water has been taken, there is provision to appeal to the Assistant Commissioner and he will go and enquire and if water is not taken he will remit. As the hon. Member knows, we have issued a circular that irrespective of whether the parties prefer an appeal or not the Assistant Commissioner should go from village to village and make enquiry and if he is satisfied that water is not taken, the water rate should be remitted.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನಲ್ಲಿ ಶಾನುಭೋಗರು ಸರಿಯಾದ ರೆಕ್ಕ ಬರೆದಿಲ್ಲ, ಸರಿಯಾಗಿ ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ ಮಾಡಿಲ್ಲ. ಆದುದರಿಂದ ಅದನ್ನು ಪರಿಶೀಲಿಸಿ ಮಾಗಡಿ ತಾಲ್ಲೂಕಿನಲ್ಲಿ ಪೂರ್ಣವಾಗಿ ಕಂದಾಯ ಮನ್ನಾ ಮಾಡಲು ಆದೇಶ ಕೊಡುವಿರಾ?

Sri H. V. KOUJALGI.—This system of levy of water rate was not there in the old Mysore area prior to 1964. These Rules were made in 1969 and they were made applicable with retrospective effect. So whatever accounts were available, the revenue authorities made local enquiries on them and on that basis these remissions have been given.

ಶ್ರೀ ಎನ್. ಚಿಕ್ಕೇಗೌಡ.—ಬೆಂಗಳೂರು ಜಿಲ್ಲೆಯಲ್ಲಿ 1965ನೆಯ ಸಾಲಿನಿಂದ 1968ನೆಯ ಸಾಲಿನವರೆಗೆ ರೆಮಿಷನ್ ಬಗ್ಗೆ ಆರ್ಡರು ಮಾಡಿರುವುದು ಯಾವಾಗ? ರೆಮಿಷನ್ ಮಾಡುವುದಕ್ಕೆ ಮುಂಚೆ, ಆರ್ಡರು ಮಾಡುವುದಕ್ಕೆ ಮುಂಚೆ ವಸೂಲುಮಾಡಿರುವ ಕಂದಾಯವನ್ನು ವಾಪಸು ಕೊಡಲಾಗುವುದೇ ಅಥವಾ ಅದನ್ನು ಏನು ಮಾಡಲಾಗುವುದು?

ಶ್ರೀ ಎಚ್. ಎ. ಕೌಜಲಗಿ.—ವಸೂಲುಮಾಡಿದ್ದರೆ ಅದನ್ನು ಮುಂದಿನ ವರ್ಷದ ಕಂದಾಯಕ್ಕೆ ಅಡ್‌ಜಸ್ಟ್ ಮಾಡಬೇಕಾಗುವುದು ಅಥವಾ ವಾಪಸು ಮಾಡಬೇಕಾಗುವುದು.

ಶ್ರೀ ಸೋಲೂರು ಸಿದ್ದಪ್ಪ.—ರೆಮಿಷನ್ ತಃಖ್ತೆ ಸರಿಯಾಗಿ ಮಾಡಿಲ್ಲ. ಆದುದರಿಂದ ಅದನ್ನು ಸರಿಪಡಿಸಬೇಕೆಂದು ನಾನು ಮತ್ತು ರಂಗೇಗೌಡರು ತಿಳಿಸಿಲ್ಲವೇ? ಅದಕ್ಕೆನು ಮಾಡಲಾಗಿದೆ?

Sri H. V. KOUJALGI.—Remissions have been given on the basis of the accounts available and local enquiries made thereon.

Sri A. R. BADRINARAYAN.—What is the principle underlying the levy of water rate? Is it on the basis of service rendered or is it on an *ad hoc* basis?

Sri H. V. KOUJALGI.—It is on service rendered.

Sri H. SIDDAVEERAPPA.—May I know in Bangalore when was land revenue revised last time and what are the various types of cesses you are collecting and at what rates?

Sri H. V. KOUJALGI.—The Land Revenue Code was revised in 1964. As hon. Membe rs know then there were disputes about water and land revenue rates. So far as Bangalore District is concerned, notices under section 12z A have been issued to all holders and they are now being enquired into. As regards the rates of cesses, I think the Land Revenue Code is quite clear.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಸರಕಾರದವರು ಈ ತಾಲ್ಲೂಕುಗಳಲ್ಲಿರುವ ಕೆರೆಗಳಿಗೆ ನದಿ ನೀರನ್ನು ಸರಬರಾಯಿ ಮಾಡಿಲ್ಲದಿರುವಾಗ ಏಕೆ ತರಿ ಕಂದಾಯವನ್ನು ಮನ್ನಾಮಾಡಿಲ್ಲ ?

ಶ್ರೀ ಎಚ್. ವಿ. ಕೌಜಲಗಿ.—64–65ರ ನಂತರ ರ್ಯಾಂಡ್‌ರೆವೆನ್ಯೂ ಮತ್ತು ವಾಟರ್ ರೇಟ್ ಬೇರೆಬೇರೆ ಮಾಡರಾಗಿದೆ, ಅದಕ್ಕೆ ಮೊದಲು ಒಂದೇ ಇತ್ತು. ನೀರನ್ನು ಉಪಯೋಗಿಸಿಕೊಂಡಿದ್ದರೆ ಮಾತ್ರ ಟ್ಯಾಕ್ಸ್ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ಇಲ್ಲ. ತಕರಾರು ಇರುವ ಕಡೆ ವಿಚಾರ ಮಾಡುತ್ತೇವೆ. ರೂಲ್ಸ್ ಆದನಂತರ 1969 ರಲ್ಲಿ ಮೂರು ವರ್ಷ ವಸೂಲುಮಾಡಿರಲಿಲ್ಲವೆಂದು ನೋಟೀಸ್ ಕೊಡರಾಗಿದೆ.

ಶ್ರೀ ಎರ್. ಶಿವಪ್ಪ.—ಐದಾರು ವರ್ಷಗಳಿಂದ ಮಳೆಬೆಳೆಯಿಲ್ಲದೆ ನಷ್ಟವಾಗಿರುವುದರಿಂದ ಮಾವು, ತೆಂಗು ಮುಂತಾದ ಫಸಲಿನ ತೋಟಗಳಿಗೆ ಅಂದರೆ ಬಾಗಾಯ್ತಿಗೆ ಕೂಡ ಅವರ ಕಂದಾಯ ವಜಾಮಾಡಲು ಆರ್ಡರು ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅದನ್ನು ಅಣೀವಾರಿಮೇಲೆ ಮಾಡರಾಗುವುದು, ನಾರ್ಯಾಣಿಗಿಂತ ಕಡಮೆ ಫಸಲಾಗಿರುವ ಕಡೆ ಮಾಡರಾಗುವುದು.

ಶ್ರೀ ಬಿ. ಬಿ. ಗಂಗಾಧರ್.—ಈಗ ಹೇಳುತ್ತಿರುವ ಸೋಷಿಯಲಿಸಂ ತತ್ವಕ್ಕನುಗುಣವಾಗಿ ರ್ಯಾಂಡ್‌ರೆವಿನ್ಯೂ ವಜಾಮಾಡುವಿರಾ ? ಹಿಂದೆ ಚೋಳರ ಕಾಲದಲ್ಲಿ ಕೆರೆಗಳನ್ನು ಕಟ್ಟಿದ್ದಾರೆ. ಅವುಗಳಲ್ಲಿ ಶೇಖರವಾಗುವ ನೀರನ್ನುಪಯೋಗಮಾಡುವುದಕ್ಕೆ ನೀರು ಸರದಿ ಹಾಕುವುದು ಅನ್ಯಾಯ ವಾದ್ದರಿಂದ ಅದನ್ನು ವಜಾಮಾಡಲು ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಎಚ್. ವಿ. ಕೌಜಲಗಿ.—ರ್ಯಾಂಡ್‌ರೆವಿನ್ಯೂ ಮನ್ನಾಮಾಡುವ ವಿಚಾರವಿಲ್ಲ ಎಂದು ಅನೇಕ ಸಾರಿ ಇಲ್ಲಿ ಹೇಳರಾಗಿದೆ. ವಾಟರ್ ರೇಟನ್ನು ಅನೇಕ ಸಣ್ಣ ಸಣ್ಣ ಕೆರೆಗಳಿಗೆ ಹಾಕ ಬಾರದು ಎಂದು ಅನೇಕ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಮೊದಲು ಹಾಕಲು ಒಪ್ಪಿದ್ದಾರೆ, ಇದು ಯೋಚನೆಮಾಡಿ ತೀರ್ಮಾನಿಸಬೇಕಾದ ವಿಷಯ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಾಟರ್ ರೇಟ್ ವಿಧಿಸುವ ಕಾಲದಲ್ಲಿ ವಾಟರ್ ರೇಟ್ ಮೇಲೆ ಸೆಸ್ ವಿಧಿಸುವುದಿಲ್ಲ ಎಂದು ಸಭೆಯಲ್ಲಿ ಭರವಸೆ ಕೊಟ್ಟದ್ದು ನಿಜವೇ ? ಹಾಗಿದ್ದರೂ ಕೂಡ ಈಗ ವಾಟರ್ ರೇಟ್ ಮೇಲೆ ಸೆಸ್ ಹಾಕಿ ವಸೂಲು ಮಾಡುತ್ತಾ ಇದ್ದೀರಿ, ಇದನ್ನು ಕೂಡಲೇ ನಿಲ್ಲಿಸುತ್ತೀರಾ ? ಇನ್ನೊಂದು ವಿಷಯ ಭೂಕಂದಾಯ ವಜಾ ಮಾಡಿರುವ ಕಡೆ ಕೂಡ ಅಂದರೆ ಅಭಾವ ಪರಿಸ್ಥಿತಿ ಇರುವ ಕಡೆ ಭೂಕಂದಾಯ ವಜಾ ಮಾಡಿದ್ದೀರಿ, ಅದರೆ ಅದರ ಮೇಲೆ ಸೆಸ್ ವಸೂಲು ಮಾಡುತ್ತಾ ಇದ್ದೀರಿ. ಈ ರೀತಿ ಅನಾಮಲಸ್ ಇವೆ ಇವೆರಡನ್ನೂ ಕೂಡ ಕೂಡಲೇ ವಜಾ ಮಾಡುವುದಕ್ಕೆ ಮೊದಲು ತೀರ್ಮಾನ ಮಾಡಿ ಆದೇಶ ಕೊಡುತ್ತೀರಾ ?

Sri H. V. KOUJALGI.—I will consider it.

ಶ್ರೀ ಎನ್. ಎ. ಚನ್ನೇಗೌಡ.—ಅಸಿಸ್ಟೆಂಟ್ ಕಮಿಷನರು ಮತ್ತು ಅಸಿಸ್ಟೆಂಟ್ ಇಂಜಿನಿಯರು ಗಳು ಎಷ್ಟು ಗ್ರಾಮಗಳಿಗೆ ಹೋಗಿದ್ದಾರೆ ? ಯಾವ ಯಾವ ಗ್ರಾಮಗಳಿಗೆ ಹೋಗಿಲ್ಲ ? ಎಷ್ಟೋ ಗ್ರಾಮಗಳಿಗೆ ಹೋಗಿಯೇ ಇಲ್ಲ. ಈ ರೀತಿ ತಮ್ಮ ಕರ್ತವ್ಯನಿರ್ವಹಿಸಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಅಂತಹ ಅಧಿಕಾರಿಗಳ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ವಿ. ಕೌಜಲಗಿ.—ಅಧಿಕಾರಿಗಳು ಹೋಗದೇ ಇರುವ ಕಡೆ ಎಷ್ಟೋ ಇವೆ. ಎಷ್ಟೋ ಕಡೆ ಹೋಗಿ ಕಾರ್ಯಗತ ಮಾಡಿದ್ದಾರೆ. ಅಲಕ್ಷ್ಯ ಮಾಡಿದ್ದಾರೆ ಅಂತ ನಮಗೆ ಅನಿಸುವುದಿಲ್ಲ.

ಶ್ರೀ ಎಸ್. ಶಿವಪ್ಪ.—ತೆಂಗಿನ ಬೆಳೆಗೆ ಅಣೀವಾರಿ ಬರೆಯತಕ್ಕ ಪದ್ಧತಿ ಸರ್ಕಾರದಲ್ಲಿ ಇಲ್ಲ. ಅದ್ದರಿಂದ ಅದಕ್ಕೆ ರೆಮಿಷನ್ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾ ಇದ್ದೀರಿ. ಅಣೀವಾರಿ ಪದ್ಧತಿ ಇಲ್ಲದೆ ಇರತಕ್ಕ ಬಾಗಾಯ್ತಿಗೆ ರಿಮಾಯಿತಿ ಕೊಡುವುದಕ್ಕೆ ಏನು ವ್ಯವಸ್ಥೆಮಾಡುತ್ತೀರಿ ? ಅದಕ್ಕೆ ಕಂದಾಯ ವಜಾ ಮಾಡಲು ಸರ್ಕಾರದವರು ಆಜ್ಞೆ ಮಾಡುವುದಕ್ಕೆ ಸಾಧ್ಯವಿಲ್ಲವೇ ?

Sri H. V. KOUJALGI.—I will consider it.

Sri B. B. SAYANAK.—It was stated that instructions have been issued to the Assistant Commissioners to visit the villages and water rate should be levied irrespective of the fact whether a person has taken water or not. May I know whether the Assistant Commissioners are going to visit the villages in their jurisdiction within their regime ?

Sri H. V. KOUJALGI.—I have already stated that they have visited many villages and yet there are some villages to be visited. In the meanwhile, the amount is not collected.

ಶ್ರೀ ಸಿ. ಎಂ. ಏಸ್. ಶಾಸ್ತ್ರಿ.—ಕೆರೆಗಳಿಗೆ ಸಂಬಂಧಪಟ್ಟಂತೆ ಯಾವುದೂ ಅಬ್ಜಕ್ಷನ್ ಬಂದಿರಲ್ಲ ಎಂದು ಹೇಳಿದಿರಿ, ಈಗ ಅಬ್ಜಕ್ಷನ್ ಬಂದಿರುವುದರಿಂದ ಈಗಲಾದರೂ ಪರಿಶೀಲನೆ ಮಾಡಿ ಆದರ ಮೇಲೆ ವಾಟರ್‌ರೇಟ್ ವಜಾಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ವಜಾಮಾಡುವ ಪ್ರಶ್ನೆಯೇ ಇಲ್ಲ. ಕಾಯಿದೆ ಪ್ರಕಾರ ಅಮಲು ಮಾಡಬೇಕಾಗುತ್ತದೆ. ತಿದ್ದುಪಡಿ ತಂದರೆ ಪರಿಶೀಲನೆ ಮಾಡಬೇಕಾಗುತ್ತದೆ.

Mr. DEPUTY SPEAKER.—Since the Hon. Minister in charge of the question is not here, I hold over Question No. 242 and also question No. 295.

Starting of Girls' High Schools

263. Sri SIDDAIAH KASHIMATH (Sirahatti).—

Will the Minister for Education be pleased to state :-

(*a*) the number of Girls' High Schools to which sanction is accorded by the Government to start during the current year ;

(*b*) the facilities to be provided by them to these schools ?

Sri N. M. KOTRABASAIAH SOGI (Deputy Minister for Education).—

(*a*) Separate Girls' Schools	...	24
Girls' Schools separated from Boys Schools	...	4
Total	...	28

(*b*) Financial assistance will be given to these schools from the year of their commencement as per grantin-aid Code relating to High Schools.

ಶ್ರೀ ಸಿದ್ದಯ್ಯ ಕಾಶೀಮಠ.—ಸರ್ಕಾರಕ್ಕೆ ಹೆಣ್ಣುಮಕ್ಕಳ ಪ್ರೌಢಶಾಲೆಗಳನ್ನು ತೆರೆಯುಬೇಕೆಂದು ಪ್ರಸಕ್ತ ಸಾಲಿನಲ್ಲಿ ಎಷ್ಟು ಅರ್ಜಿಗಳು ಬಂದಿದ್ದವು ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಬಗ್ಗೆ ಮಾಹಿತಿ ನನ್ನಲ್ಲಿ ಇಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಹೆಣ್ಣುಮಕ್ಕಳ ಪ್ರೌಢಶಾಲೆಗಳಲ್ಲಿ ಹೆಚ್ಚಾಗಿ ಗಂಡುಮಕ್ಕಳೇ ಶಿಕ್ಷಕರಾಗಿರುವುದರಿಂದ ಹೆಣ್ಣುಮಕ್ಕಳ ಶಾಲೆಯನ್ನು ತರೆಯುವುದರ ಉದ್ದೇಶ ಸಾಫಲ್ಯವಾಗುವುದಿಲ್ಲ. ಶಿಕ್ಷಕಿಯರನ್ನೇ ನೇಮಿಸುವುದಕ್ಕೆ ಕಟ್ಟುನಿಟ್ಟಾಗಿ ಆದೇಶ ಕೊಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಹಿಳಾ ಶಿಕ್ಷಕಿಯರನ್ನೂ ನೇಮಕ ಮಾಡಿದ್ದೇವೆ. ಅವರನ್ನೇ ನೇಮಕ ಮಾಡುವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಾ ಇದ್ದೇವೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಘಟನೆ ಪ್ರಕಾರ ಹೆಣ್ಣುಮಕ್ಕಳು, ಗಂಡುಮಕ್ಕಳು ಸರಿಸಮ ಅಂತ ಇರುವುದರಿಂದ ಇನ್ನು ಮೇಲೆ ಗರ್ಲ್ಸ್‌ಸ್ಕೂಲುಗಳನ್ನು ಓಪನ್ ಮಾಡುವುದನ್ನು ಬಂದ್ ಮಾಡುತ್ತೀರಾ ?